

بِسْمِ اللهِ الرَّحْمٰنِ الرَّحِيمِ

# ಕೆಡುಕನ್ನು ದೂರೀಕರಿಸಿ ಒಳಿತನ್ನು ಸ್ವಾಯತ್ತ ಮಾಡಿಕೊಳ್ಳಿರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **27-10-2017** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಸತ್ಯವಿಶ್ವಾಸಿಗಳೊಂದಿಗೆ ಅಲ್ಲಾಹನು ಹೇಳಿರುವನು, **ಫಸ್ತಬಿಖುಲ್ ಖೈರಾತ್** ನೀವು ಸತ್ಕರ್ಮದಲ್ಲಿ ಮೇಲುಗೈಯಾಗಲು ಸ್ಪರ್ಧಿಸಿರಿ (2:139) ಎಂಬುದನ್ನು ನೀವು ಯಾವಾಗಲೂ ನಿಮ್ಮ ಲಕ್ಷ್ಯವನ್ನಾಗಿಟ್ಟುಕೊಳ್ಳಿರಿ ಎಂದು. ಎಂದರೆ ಸತ್ಕರ್ಮ ಮಾಡುವುದರಲ್ಲಿ ಒಬ್ಬರಿಗಿಂತ ಇನ್ನೊಬ್ಬರು ಮುಂದೆ ಸಾಗಲು ಪ್ರಯತ್ನಿಸಬೇಕು. ಸತ್ಕರ್ಮಗಳನ್ನು ಮಾಡುವವರನ್ನು ಅಲ್ಲಾಹನು ಸೃಷ್ಟಿಗಳಲ್ಲಿ ಅತ್ಯುತ್ತಮವೆಂದು ಸಹ ಹೇಳಿದ್ದಾನೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳುತ್ತಾನೆ: **ಇನ್ನಲ್ಲದೀನ ಆಮನೂ ವಅಮಿಲುಸ್ಸಾಲಿಹಾತಿ ಉಲಾಯಿಕ ಹುಮ್ ಖೈರುಲ್ ಬರಿಯ್ಯ.** ನಿಸ್ಸಂದೇಹವಾಗಿಯೂ ಯಾರು ವಿಶ್ವಾಸ ಹೊಂದಿ ಸತ್ಕರ್ಮ ನಿರತರಾಗಿರುತ್ತಾರೋ ಅವರೇ ಅತ್ಯುತ್ಕೃಷ್ಟ ಜೀವಿಗಳು. (98:8).

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ವಿಷಯವನ್ನು ವಿವರಿಸುತ್ತಾ ಒಂದು ಸ್ಥಳದಲ್ಲಿ ಸಂಕ್ಷಿಪ್ತವಾಗಿ ಹೀಗೆ ಹೇಳಿದ್ದಾರೆ: ಮನುಷ್ಯನು ತನ್ನ ಕಡ್ಡಾಯ ಕರ್ತವ್ಯಗಳನ್ನು (ಫರ್ಝ್‌ಗಳನ್ನು) ಈಡೇರಿಸುವುದು ಆವಶ್ಯಕವಾಗಿದೆ. ಅಂತೆಯೇ ಸತ್ಕರ್ಮಗಳಲ್ಲಿ ಅಭಿವೃದ್ಧಿ ಹೊಂದುವುದು ಸಹ ಆವಶ್ಯಕವಾಗಿದೆ.

ಆದುದರಿಂದ ಸತ್ಕರ್ಮಗಳಲ್ಲಿ ಅಭಿವೃದ್ಧಿ ಹೊಂದುವುದು, ಸತ್ಕರ್ಮಗಳನ್ನು ಮಾಡುವುದು, ಒಳಿತುಗಳನ್ನು ಮಾಡುವುದು ಇವುಗಳೇ ಒಬ್ಬ ಮುಸ್ಲಿಮನನ್ನು, ಒಬ್ಬ ಮೂಮಿನನನ್ನು ನೈಜ ಮೂಮಿನ್ ಆಗಿ ಮಾಡುವುದು. ನಾವು ಹೀಗೆ ಆಗಲು ಯಾವಾಗಲೂ ಪ್ರಯತ್ನ ಮಾಡುತ್ತಾ ಇರಬೇಕು.

ಸತ್ಕರ್ಮ ಎಂದರೇನು ಎಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನೀಡಿದ ಕೆಲವು ವಿಶದೀಕರಣಗಳನ್ನು ಈಗ ನಾನು ನಿಮ್ಮ ಮುಂದೆ ವಿವರಿಸುವೆನು. ಒಂದು ಚಿಕ್ಕ ಒಳಿತು ಸಹ ಅಲ್ಲಾಹನ ಸಂಪ್ರೀತಿಗೆ ಕಾರಣವಾಗುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ, ಸತ್ಕರ್ಮವು ಇಸ್ಲಾಮ್ ಮತ್ತು ಅಲ್ಲಾಹನ ಕಡೆಗೆ ಏರಿ ಹೋಗಲು ಇರುವ ಒಂದು ಏಣಿಯಾಗಿದೆ. ಆದರೆ ನೆನಪಿಟ್ಟುಕೊಳ್ಳಿರಿ, ಶೈತಾನನು ಜನರನ್ನು ದಾರಿತಪ್ಪಿಸುತ್ತಾನೆ. ಅಲ್ಲಾಹನು ಹೇಳಿರುವನು: **ವಯುತ್‌ಇಮೂನತ್ತ‌ಆಮ ಅಲಾ ಹುಬ್ಬಿಹೀ ಮಿಸ್‌ಕೀನನ್ ವ ಯತೀಮನ್ ವಅಸೀರ**. ಅವನ (ಅಲ್ಲಾಹನ) ಸಂಪ್ರೀತಿಗೋಸ್ಕರ ಅವರು ಬಡವರಿಗೂ ಅನಾಥರಿಗೂ ಕೈದಿಗಳಿಗೂ ಅನ್ನದಾನ ಮಾಡುತ್ತಾರೆ. (76:9). ತಆಮ್ ಎಂದರೆ ಇಷ್ಟಕರವಾದ ಆಹಾರ ಎಂದು ಅರ್ಥ. ಅಂತಹ ಆಹಾರ ನಮ್ಮ ಮುಂದೆ ಇರುವಾಗ ಒಬ್ಬ ಭಿಕ್ಷುಕ ಬಂದು ಆವಶ್ಯಪಟ್ಟರೆ ಅವನಿಗೆ ಆ ಆಹಾರದಿಂದ ಕೊಟ್ಟರೆ ಅದು ಸತ್ಕರ್ಮವಾಗುತ್ತದೆ. ಆದರೆ ಆಗ ನಾನು ನನ್ನ ಮುಂದೆ ಇರುವ ತಾಜಾ ಆಹಾರ ತಿಂದು ನಿನ್ನೆ ಬಾಕಿಯಾದ ಹಳಸಿದ ಆಹಾರ ಪದಾರ್ಥವನ್ನು ಭಿಕ್ಷುಕನಿಗೆ ಕೊಡಬೇಕೆಂದು ಮನೆಯವರಿಗೆ ಹೇಳುವುದು ಸತ್ಕರ್ಮವೇನೂ ಅಲ್ಲ. ಆದುದರಿಂದ ಮನುಷ್ಯನು ಇವುಗಳ ಬಗ್ಗೆ ಗಾಢವಾಗಿ ಚಿಂತಿಸುವುದಾದರೆ ಮಾತ್ರ ವಾಸ್ತವಿಕ ಒಳಿತುಗಳನ್ನು ಗಳಿಸಲು ಸಾಧ್ಯವಾಗುವುದು. ಮನುಷ್ಯನು ನೈಜ ಸತ್ಕರ್ಮಗಳನ್ನು ಮಾಡಲು ಪ್ರಯತ್ನಿಸಬೇಕು. ಒಳಿತನ್ನು ಗಳಿಸುವುದು ಹೇಗೆ? ಅಲ್ಲಾಹನ ಬಗ್ಗೆ ಪರಿಪೂರ್ಣ ವಿಶ್ವಾಸ ಗಳಿಸದೆ ಒಳಿತನ್ನು ಗಳಿಸಲು ಸಾಧ್ಯವಾಗದು.

ಇದರ ಬಗ್ಗೆ ಹೆಚ್ಚಿಗೆ ವಿವರಣೆ ನೀಡುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇನ್ನೊಂದು ಸ್ಥಳದಲ್ಲಿ ಹೀಗೆ ಹೇಳುತ್ತಾರೆ: ವಾಸ್ತವಿಕವಾಗಿ ಒಳಿತುಗಳನ್ನು ಗಳಿಸಲು ಅಲ್ಲಾಹನ ಅಸ್ತಿತ್ವದ ಬಗ್ಗೆ ದೃಢ ವಿಶ್ವಾಸ ಅತ್ಯಾವಶ್ಯಕವಾಗಿದೆ. ಸರಕಾರಿ ಅಧಿಕಾರಿಗಳಿಗೆ ಒಂದು ಮನೆಯೊಳಗೆ ಒಬ್ಬನು ಏನು ಮಾಡುತ್ತಾನೆಂದು ತಿಳಿಯಲು ಸಾಧ್ಯವಿಲ್ಲ. ಪರದೆಯೊಳಗೆ ಯಾರು ಏನು ಮಾಡುತ್ತಾರೆಂದು ತಿಳಿಯುವುದು ಅಸಾಧ್ಯವಾಗಿದೆ. ಆದರೆ ಅಲ್ಲಾಹನ ಅಸ್ತಿತ್ವದ ಬಗ್ಗೆ ವಿಶ್ವಾಸವನ್ನು ಹೊಂದಿರುವವನು ಅಲ್ಲಾಹನು ಎಲ್ಲವನ್ನೂ ನೋಡುತ್ತಿದ್ದಾನೆ, ಅವನಿಗೆ ಎಲ್ಲವೂ ತಿಳಿಯುತ್ತದೆ ಎಂದು ಸಹ ನಂಬುತ್ತಾನೆ. ಮನುಷ್ಯನು ಕೆಲವು ಸಾರಿ ಅಡಗಿ ಕೆಲಸ ಮಾಡುತ್ತಾನೆ. ಅವನನ್ನು ಬಾಹ್ಯವಾಗಿ ಯಾರೂ ನೋಡುತ್ತಾ ಇರುವುದಿಲ್ಲ ಎಂದು ಅವನಿಗೆ ತಿಳಿದಿರುತ್ತದೆ. ಆದುದರಿಂದ ಅವನು ಭಯ ರಹಿತವಾಗಿ ಕೆಟ್ಟ ಕೆಲಸ ಮಾಡುತ್ತಾನೆ. ಆದರೆ ಅಲ್ಲಾಹನಿಗೆ ಅವರ ಬಗ್ಗೆ ತಿಳಿದಿರುತ್ತದೆ. ಆದುದರಿಂದ ವಾಸ್ತವಿಕವಾಗಿ ಒಳಿತನ್ನು ಮಾಡಬೇಕಾದರೆ ಅಲ್ಲಾಹನ ಬಗ್ಗೆ ದೃಢವಿಶ್ವಾಸ ಅತ್ಯಾವಶ್ಯಕವಾಗಿದೆ.

ನೈಜ ಒಳಿತಿನ ಬಗ್ಗೆ ಇನ್ನಷ್ಟು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ತಖ್ವ ಎಂದರೆ ಕೆಡುಕಿನ ಸೂಕ್ಷ್ಮ ಮಾರ್ಗದಿಂದಲೂ ದೂರ ಸರಿಯುವುದಾಗಿದೆ. ಆದರೆ ಒಬ್ಬನು ನಾನು ಒಳ್ಳೆಯವನಾಗಿದ್ದೇನೆ ಏಕೆಂದರೆ ನಾನು ಅನ್ಯನ ಸಂಪತ್ತನ್ನು ಅಪಹರಿಸಿಲ್ಲ, ಕಳ್ಳತನ ಮಾಡಿಲ್ಲ, ವಿಶ್ವಾಸ ವಂಚನೆ ಮಾಡಿಲ್ಲ, ತಪ್ಪಾದ ರೀತಿಯಲ್ಲಿ ಸಂಪಾದಿಸಿಲ್ಲ ಎಂದು ಹೇಳುವುದಾದರೆ ಅದು ಒಳಿತು ಅಲ್ಲ. ಇಂತಹ ಒಳಿತು ಜ್ಞಾನಿಯ ದೃಷ್ಟಿಯಲ್ಲಿ ಅಪಹಾಸ್ಯಕರವಾಗಿದೆ. ಏಕೆಂದರೆ ಅವನು ಕೆಟ್ಟ ಕೆಲಸ ಮಾಡಿದರೆ, ಕಳ್ಳತನ, ಡಕಾಯಿತಿ ಮಾಡಿದರೆ ಅವನು ಶಿಕ್ಷಿಸಲ್ಪಡುವನು. ವಾಸ್ತವಿಕ ಒಳಿತು ಮಾನವರ ಸೇವೆ ಮಾಡುವುದಾಗಿದೆ ಮತ್ತು ಅಲ್ಲಾಹನ ಮಾರ್ಗದಲ್ಲಿ ಪರಿಪೂರ್ಣ ಸತ್ಯಸಂಧತೆ ಮತ್ತು ನಿಷ್ಠೆ ಪ್ರಕಟಿಸುವುದಾಗಿದೆ ಮತ್ತು ಅಲ್ಲಾಹನ ಮಾರ್ಗದಲ್ಲಿ ಜೀವಾರ್ಪಣೆ ಮಾಡಲು ಸಿದ್ಧನಾಗಿರುವುದಾಗಿದೆ. ಆದುದರಿಂದ ಅಲ್ಲಾಹನು ಪವಿತ್ರ

ಖುರ್‌ಆನಿನಲ್ಲಿ ಹೀಗೆ ಹೇಳಿದ್ದಾನೆ: **ಇನ್ನಲ್ಲಾಹ ಮಅಲ್ಲದೀನತ್ತಖವ್ ವಲ್ಲದೀನ ಹುಮ್ ಮುಹ್‌ಸಿನೂನ್.** ನಿಶ್ಚಯವಾಗಿಯೂ ಭಯಭಕ್ತಿಯುಳ್ಳವರ ಮತ್ತು ಸತ್ಕರ್ಮ ಮಾಡುವವರ ಜೊತೆಯಲ್ಲಿ ಅಲ್ಲಾಹನಿದ್ದಾನೆ. (16:129).

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಅಲ್ಲಾಹನ ದೃಷ್ಟಿಯಲ್ಲಿ ಇಸ್ಲಾಮ್ ಎಂದರೆ ಕೇವಲ ಕೆಟ್ಟ ಕೆಲಸಗಳಿಂದ ದೂರ ಸರಿಯುವುದರ ಹೆಸರಲ್ಲ. ಕೆಟ್ಟ ಕೆಲಸಗಳನ್ನು ಬಿಟ್ಟು ಸತ್ಕರ್ಮಗಳನ್ನು ಸ್ವಾಯತ್ತ ಮಾಡುವ ತನಕ ಆಧ್ಯಾತ್ಮಿಕ ಜೀವಿತದಲ್ಲಿ ಜೀವದಿಂದಿರಲು ಸಾಧ್ಯವಾಗದು. ಇಸ್ಲಾಮಿನ ಮೂಲ ತತ್ವ ಆಧ್ಯಾತ್ಮಿಕತೆಯಲ್ಲಿ ವರ್ಧಿಸಬೇಕೆಂದಾಗಿದೆ. ಆಧ್ಯಾತ್ಮಿಕತೆಯನ್ನು ಉತ್ತಮಗೊಳಿಸಬೇಕೆಂದಾಗಿದೆ. ಕೇವಲ ಕೆಟ್ಟ ಕೆಲಸಗಳನ್ನು ಮಾಡದೆ ಇರುವುದರಿಂದ ಆಧ್ಯಾತ್ಮಿಕ ಜೀವಿತ ಉತ್ತಮವಾಗಲಾರದು. ಕೆಟ್ಟ ಕೆಲಸಗಳನ್ನು ಬಿಟ್ಟು ಸತ್ಕರ್ಮಗಳನ್ನು ಸಹ ಮಾಡುವುದು ಆವಶ್ಯಕವಾಗಿದೆ. ಒಳಿತುಗಳು ಆಹಾರ ಪದಾರ್ಥಗಳ ಹಾಗಿವೆ. ಆಹಾರವಿಲ್ಲದೆ ಮನುಷ್ಯನು ಜೀವಿಸಲಾರ. ಇದೇ ರೀತಿ ಸತ್ಕರ್ಮ ಮಾಡದಿದ್ದರೆ ಏನೂ ಪ್ರಯೋಜನವಿಲ್ಲ. ವಿಶ್ವಾಸ ವರ್ಧಿಸುವಾಗ ಒಳಿತುಗಳು ವರ್ಧಿಸುತ್ತವೆ. ಅಲ್ಲಾಹನ ಬಗ್ಗೆ ವಿಶ್ವಾಸ ಯಾವ ಮಟ್ಟದಲ್ಲಿರಬೇಕು? ಮನುಷ್ಯನ ಬಾಹ್ಯ ಸ್ಥಿತಿ ಮತ್ತು ಅಂತರಂಗದ ಸ್ಥಿತಿ ಒಂದೇ ರೀತಿ ಇರಬೇಕು. ಕೇವಲ ಬಾಹ್ಯ ವಿಶ್ವಾಸವಿದ್ದರೆ ಸಾಕಾಗಲಾರದು. ಒಂದು ವಿಷಪದಾರ್ಥದ ಬಗ್ಗೆ ಅದು ಹಾನಿಕಾರಕವಾಗಿದೆ, ಅದನ್ನು ತಿಂದರೆ ಮನುಷ್ಯನು ಸಾಯುತ್ತಾನೆ ಎಂದು ದೃಢವಾಗಿ ನಂಬುವ ಹಾಗೆಯೇ ಅಲ್ಲಾಹನ ಅಸ್ತಿತ್ವದ ಬಗ್ಗೆ ದೃಢ ವಿಶ್ವಾಸವಿರಬೇಕು. ನಾವು ಕೆಟ್ಟ ಕೆಲಸ ಮಾಡುವುದನ್ನು ಅಲ್ಲಾಹನು ಯಾವಾಗಲೂ ನೋಡುತ್ತಿರುತ್ತಾನೆ ಅವನು ಶಿಕ್ಷಿಸುವನು ಎಂಬ ದೃಢ ವಿಶ್ವಾಸವಿರಬೇಕು.

ಸತ್ಯವಿಶ್ವಾಸ ಬಲಿಷ್ಠವಾಗಿರಬೇಕು ಎಂಬುದರ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪ್ರತಿಯೊಂದು ಪರಿಶುದ್ಧತೆ ಮತ್ತು ಸತ್ಕರ್ಮದ ಬೇರು ಅಲ್ಲಾಹನ ಬಗ್ಗೆ ದೃಢವಿಶ್ವಾಸ ಹೊಂದುವುದಾಗಿದೆ. ಅಲ್ಲಾಹನ ಬಗ್ಗೆ ವಿಶ್ವಾಸ ಎಷ್ಟರಮಟ್ಟಿಗೆ ಬಲಹೀನವಾಗುತ್ತದೆಯೋ ಅದೇ ಮಟ್ಟದಲ್ಲಿ ಸತ್ಕರ್ಮ ಮಾಡುವುದರಲ್ಲಿ ಬಲಹೀನತೆ ಮತ್ತು ಉದಾಸೀನತೆ ಹುಟ್ಟುತ್ತದೆ. ಅಲ್ಲಾಹನು ಸರ್ವಶಕ್ತನೂ ಅದೃಶ್ಯಕಾರ್ಯಗಳನ್ನು ಅರಿತವನೂ ಎಲ್ಲಾ ಸ್ಥಳಗಳಲ್ಲೂ ನನ್ನನ್ನು ನೋಡುತ್ತಾ ಇದ್ದಾನೆ ಎಂಬ ದೃಢವಿಶ್ವಾಸ ಮನುಷ್ಯನಲ್ಲಿ ಉಂಟಾಗುವುದಾದರೆ ಅವನ ಕರ್ಮಗಳಲ್ಲಿ ಅದ್ಭುತಕರವಾದ ಬದಲಾವಣೆ ತಲೆದೋರುತ್ತದೆ. ತಾನಾಗಿಯೇ ಉತ್ತಮ ಕರ್ಮಗಳು ಪ್ರಾರಂಭವಾಗುತ್ತವೆ. ಕೆಟ್ಟ ಕೆಲಸಗಳಿಗೆ ಬದಲಾಗಿ ಸತ್ಕರ್ಮಗಳನ್ನು ಮಾಡುವ ಬಗ್ಗೆ ಹೆಚ್ಚು ಶ್ರದ್ಧೆ ಉಂಟಾಗಲು ಪ್ರಾರಂಭವಾಗುತ್ತದೆ. ಅಲ್ಲಾಹನ ಬಗ್ಗೆ ದೃಢವಿಶ್ವಾಸವುಳ್ಳವನು ಪಾಪ ಕೃತ್ಯ ಮಾಡುವ ಸಾಮರ್ಥ್ಯವನ್ನೇ ಹೊಂದಲಾರನು. ಏಕೆಂದರೆ ಸತ್ಯವಿಶ್ವಾಸಿಯ ದೃಢವಿಶ್ವಾಸ ಇಂದ್ರಿಯಾಸಕ್ತಿಗಳನ್ನೂ ಪಾಪಕೃತ್ಯ ಮಾಡುವ ಅಂಗಾಂಗಗಳನ್ನೂ ಕಡಿದು ಹಾಕುತ್ತವೆ. ನೋಡಿರಿ, ಒಬ್ಬನ ಕಣ್ಣುಗಳನ್ನು ಕಿತ್ತು ಬಿಟ್ಟರೆ ಅವನು ಕಣ್ಣುಗಳಿಂದ ಹೇಗೆ ತಾನೆ ದುರ್ನೋಟ ಬೀರಬಲ್ಲನು. ಅವನು ಕಣ್ಣುಗಳಿಂದ ಹೇಗೆ ಪಾಪ ಕೃತ್ಯ ಮಾಡಬಲ್ಲನು. ಅದೇ ರೀತಿ ಒಬ್ಬನ ಕೈಗಳನ್ನು ಕಡಿದು ಹಾಕಿದರೆ ಕೈಗಳಿಗೆ ಸಂಬಂಧಿಸಿದ ಪಾಪ ಕೃತ್ಯಗಳನ್ನು ಹೇಗೆ ತಾನೆ ಮಾಡಬಲ್ಲನು. ಅಂತೆಯೇ ಒಬ್ಬನು **ನಫ್ಸೇ ಮುತ್‌ಮಯಿನ್ನ**ದ (ಶಾಂತಿಯನ್ನು ಗಳಿಸಿದ ಆತ್ಮದ) ಸ್ಥಿತಿಯಲ್ಲಿದ್ದರೆ ಅವನ **ನಫ್ಸೇ ಮುತ್‌ಮಯಿನ್ನ** ಅವನನ್ನು ಅಂಧನನ್ನಾಗಿ ಮಾಡುತ್ತದೆ. ಅವನ ಕಣ್ಣುಗಳಲ್ಲಿ ಪಾಪ ಕೃತ್ಯ ಮಾಡುವ ಶಕ್ತಿ ಇರುವುದಿಲ್ಲ. ಅವನು ಕಾಣುತ್ತಾನೆಯಾದರೂ ಕಾಣುವುದಿಲ್ಲ. ಅವನ ಎಲ್ಲಾ ಇಂದ್ರಿಯಾಸಕ್ತಿಗಳು ಮತ್ತು ಶಕ್ತಿಗಳು ಮತ್ತು ಆಂತರಿಕ ಅಂಗಾಂಗಗಳು ಕಡಿದು ಹಾಕಲ್ಪಡುತ್ತವೆ. ಪಾಪ ಕೃತ್ಯಗಳು ಘಟಿಸಲು ಸಾಧ್ಯವಿರುವ ಎಲ್ಲಾ ಶಕ್ತಿಗಳ ಮೇಲೆ ಮೃತ್ಯು ಬಂದೆರಗುತ್ತದೆ. ಅವನು ಒಂದು ಮೃತ ಶರೀರದ ಹಾಗೆ ಆಗುತ್ತಾನೆ. ಅವನು ಅಲ್ಲಾಹನ ಇಚ್ಛೆಗೆ ಅಧೀನನಾಗಿರುತ್ತಾನೆ. ಅವನ ಇಚ್ಛೆಗೆ ಅನುಸಾರವಾಗಿ ಹೊರತು ಒಂದು ಹೆಜ್ಜೆ ಸಹ ಎತ್ತಲು ಅವನು ಸಮರ್ಥನಾಗಲಾರನು.

ಮೇಲೆ ವಿವರಿಸಿದವುಗಳು ನಮ್ಮ ಉದ್ದೇಶಿತ ಲಕ್ಷ್ಯಗಳಾಗಿವೆ. ಅವುಗಳನ್ನು ನಮ್ಮ ಮುಂದೆ ಇರಿಸಬೇಕು. ಎಲ್ಲಾ ವಿಧಗಳ ಕೊಳಕುಗಳನ್ನು ನಮ್ಮ ಮನಸ್ಸಿನಿಂದಲೂ, ನಮ್ಮ ಮಸ್ತಿಷ್ಕದಿಂದಲೂ, ನಮ್ಮ ಕಣ್ಣುಗಳಿಂದಲೂ, ನಮ್ಮ ಕಿವಿಗಳಿಂದಲೂ ಹೊರಗೆ ಹಾಕಬೇಕು. ಪರಿಪೂರ್ಣ ಸಮಾಧಾನ ಹೊಂದಲು ನಮ್ಮ ಜಮಾಅತಿನವರು ಪರಿಪೂರ್ಣ ವಿಶ್ವಾಸವನ್ನು ಹೊಂದುವುದು ಆವಶ್ಯಕವಾಗಿದೆ. ಆದುದರಿಂದ ನಮ್ಮ ಜಮಾಅತಿಗೆ ಪ್ರಥಮ ಫರ್ಝ್ ಆಗಿರುವುದು ಅಲ್ಲಾಹನ ಬಗ್ಗೆ ಸತ್ಯವಾದ ವಿಶ್ವಾಸಗಳಿಸುವುದಾಗಿದೆ.

ಒಳಿತುಗಳ ಪಾರ್ಶ್ವಗಳನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮನುಷ್ಯರಿಗೆ ಎರಡು ವಿಷಯಗಳು ಆವಶ್ಯಕವಾಗಿವೆ. ಕೆಡುಕಿನಿಂದ ರಕ್ಷಿಸಿಕೊಳ್ಳಬೇಕು ಮತ್ತು ಒಳಿತಿನ ಕಡೆಗೆ ಓಡಬೇಕು. ಒಳಿತಿಗೆ ಎರಡು ಪಾರ್ಶ್ವಗಳಿವೆ. ಒಂದನೆಯದು, ಕೆಡುಕುಗಳನ್ನು ಬಿಡುವುದು. ಎರಡನೆಯದು, ಒಳಿತನ್ನು ಮಾಡುವುದು. ಕೆಡುಕನ್ನು ಮಾಡದೆ ಇರುವುದು ಒಳಿತಿನ ಒಂದು ಪಾರ್ಶ್ವಮಾತ್ರವಾಗಿದೆ. ಒಳಿತಿನ ಎರಡನೆಯ ಪಾರ್ಶ್ವ ಸತ್ಕರ್ಮ ಮಾಡುವುದಾಗಿದೆ. ಕೇವಲ ಕೆಡುಕುಗಳನ್ನು ಬಿಡುವುದರಿಂದ ಮನುಷ್ಯನು ಪರಿಪೂರ್ಣನಾಗಲಾರನು. ಕೇವಲ ಕೆಡುಕುಗಳನ್ನು ಬಿಡುವುದರಿಂದ ಪರಿಪೂರ್ಣತೆ ಸಿಗಲಾರದು. ಅಂತಹ ವ್ಯಕ್ತಿಯ ವಿಶ್ವಾಸದಲ್ಲಿ ಬಲಹೀನತೆಗಳು ಉಳಿದಿರುತ್ತದೆ ಮತ್ತು ಸತ್ಕರ್ಮಗಳನ್ನು ಮಾಡುವ ತನಕ ಅವು ಇರುತ್ತವೆ. ಎಂದರೆ ಅನ್ಯರಿಗೆ ಸಹ ಲಾಭವುಂಟಾಗುವಂತೆ ವರ್ತಿಸಬೇಕು. ಆಗ ವಿಶ್ವಾಸ ಪೂರ್ಣವಾಗುತ್ತದೆ. ಇಂತಹ ಸ್ಥಿತಿ ಗಳಿಸುವ ತನಕ ಮನುಷ್ಯನು ಕೆಡುಕುಗಳಿಂದ ತನ್ನನ್ನು ರಕ್ಷಿಸಿಕೊಳ್ಳಲಾರನು. ಅಲ್ಲಾಹನ ಗುಣಗಳ ಬಗ್ಗೆ ತಿಳಿದುಕೊಳ್ಳಲು ಮನುಷ್ಯನು ಯಾವಾಗಲೂ ಪವಿತ್ರ ಖುರ್‌ಆನನ್ನು ಓದುತ್ತಾ ಇರಬೇಕು. ಮತ್ತು ಅಲ್ಲಾಹನ ಆಜ್ಞೆಗಳ ಬಗ್ಗೆ ತಿಳಿಯುತ್ತಾ ಇರಬೇಕು.

ಅಲ್ಲಾಹನ ಬಗ್ಗೆ ಪರಿಪೂರ್ಣ ವಿಶ್ವಾಸ ಗಳಿಸಿದ ನಂತರ ಶಾರೀರಿಕ ದುರ್ವರ್ತನೆಗಳಿಂದ ರಕ್ಷಣೆ ಪಡೆಯುವ ಮಾರ್ಗಗಳ ಬಗ್ಗೆ ವಿವರಣೆ ನೀಡುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೆಡುಕುಗಳಿಂದ ರಕ್ಷಣೆ ಪಡೆಯುವ ಪ್ರಥಮ ಹಂತ ಅಲ್ಲಾಹನ ಬಗ್ಗೆ ಪರಿಪೂರ್ಣ ವಿಶ್ವಾಸವನ್ನು ಹೊಂದುವುದಾಗಿದೆ. ಎರಡನೆಯ ಹಂತದಲ್ಲಿ ಅಲ್ಲಾಹನಿಂದ ಆಯ್ಕೆಗೊಂಡ ಮಹಾನುಭಾವರು ಅನುಸರಿಸಿದ ಮಾರ್ಗಗಳನ್ನು ಹುಡುಕಿ ಆ ಮಾರ್ಗಗಳನ್ನು ಅನುಸರಿಸುತ್ತಾ ಇರುವುದಾಗಿದೆ. ಅಲ್ಲಾಹನು ಅಂತಹ ಜನರೊಂದಿಗೆ ಹೇಗೆ ವರ್ತಿಸಿದನು ಎಂಬುದನ್ನು ತಿಳಿಯುವುದರ ಮೂಲಕ ಅವರು ಅನುಸರಿಸಿದ ಮಾರ್ಗದ ಬಗ್ಗೆ ತಿಳಿಯುತ್ತದೆ. ಅಲ್ಲಾಹನ ಪ್ರತಾಪಶಾಲಿ ಗುಣಗಳ ಬಗ್ಗೆ ತಿಳಿದುಕೊಳ್ಳುವುದು ಕೆಡುಕುಗಳಿಂದ ರಕ್ಷಣೆ ಪಡೆದುಕೊಳ್ಳುವ ಪ್ರಥಮ ಹಂತವಾಗಿದೆ. ಆ ಗುಣಗಳು ಅಲ್ಲಾಹನ ಸಾಮೀಪ್ಯ ಗಳಿಸಿದವರ ಶತ್ರುಗಳನ್ನು ನಾಶ ಮಾಡುತ್ತವೆ. ಸತ್ಯವಿಶ್ವಾಸಿಗೆ ಆತ್ಮಶಕ್ತಿ ಅಲ್ಲಾಹನ ಸೌಮ್ಯ ಗುಣಗಳಿಂದ ಲಭಿಸುತ್ತದೆ. ಅಲ್ಲಾಹನಿಂದ ದೊರಕುವ ಶಕ್ತಿಯ ಇಸ್ಲಾಮೀ ಸಾಂಕೇತಿಕ ಪದ **ರೂಹುಲ್ ಖುದ್ಸ್** ಎಂದಾಗಿದೆ. ಅಲ್ಲಾಹನಿಂದ ಈ ಶಕ್ತಿ ದೊರಕುವ ತನಕ ಏನೂ ಮಾಡಲು ಸಾಧ್ಯವಾಗಲಾರದು. ಇದು ಅಲ್ಲಾಹನಿಂದ ಸಿಗುವ ಒಂದು ಶಕ್ತಿಯಾಗಿದೆ. ಅದು ಅವತೀರ್ಣವಾದ ಕೂಡಲೆ ಹೃದಯದಲ್ಲಿ ಒಂದು ಸಾಂತ್ವನ ಭಾವ ಉಂಟಾಗುತ್ತದೆ ಮತ್ತು ಒಳಿತುಗಳನ್ನು ಮಾಡುವ ಬಗ್ಗೆ ಪ್ರೀತಿ ಮತ್ತು ಆಸಕ್ತಿ ತಲೆದೋರುತ್ತದೆ. **ರೂಹುಲ್ ಖುದ್ಸ್** ಗಳಿಸಿದ ವ್ಯಕ್ತಿಗೆ ಒಳಿತುಗಳ ಒಳಗಿರುವ ಸೌಂದರ್ಯ ಗೋಚರಿಸುತ್ತದೆ. ಅವನು ತಾನಾಗಿ ಅವುಗಳ ಕಡೆಗೆ ಆಗ ಓಡಲು ತೊಡಗುತ್ತಾನೆ. ಕೆಡುಕಿನ ಬಗ್ಗೆ ಯೋಚಿಸಿದ ಕೂಡಲೆ ಅವನ ಆತ್ಮ ಕಂಪಿಸಲು ತೊಡಗುತ್ತದೆ. ಆಗ ಅಂತಹ ವ್ಯಕ್ತಿಗೆ ತಾಜಾ ಪ್ರಕಾಶಗಳು ದೊರಕುತ್ತವೆ. ಒಬ್ಬನಿಗೆ ಕೆಲವು ಸಾರಿ ಹೃದಯಾರ್ದ್ರತೆ ತಲೆದೋರಿ ಕೆಲವೊಮ್ಮೆ ಅವನು ನಮಾಝ್‌ನಲ್ಲಿ ಅಳುತ್ತಾ ಇದ್ದರೆ ಮತ್ತು ಹೃದಯ ಮೃದುವಾದರೆ ಅವನು ಅದು ತನ್ನ ಆಧ್ಯಾತ್ಮಿಕ ಅಭಿವೃದ್ಧಿಯ ಶಿಖರ ತಲಪಿದುದರ ಸೂಚನೆ ಎಂದು ಭಾವಿಸಬಾರದು. ಇದು ತಾತ್ಕಾಲಿಕ ಆರ್ದ್ರತೆಯಾಗಿದೆ.

ಕೆಡುಕುಗಳಿಂದ ಪೂರ್ಣವಾಗಿ ರಕ್ಷಿಸಲ್ಪಟ್ಟು ಸತ್ಕರ್ಮಗಳನ್ನು ಅಲ್ಲಾಹನ ಸಂತೃಪ್ತಿಗೋಸ್ಕರ ಮಾಡುವಾಗ ಮಾತ್ರ ಆಧ್ಯಾತ್ಮಿಕ ಅಭಿವೃದ್ಧಿ ಎಂದು ಗಣಿಸಬಹುದಾಗಿದೆ. ಒಳಿತುಗಳ ಭಾಗಗಳ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮೊದಲು ಎರಡು ಪಾರ್ಶ್ವಗಳಿದ್ದುವು. ಕೆಡುಕುಗಳನ್ನು ಬಿಡುವುದು ಮತ್ತು ಒಳಿತುಗಳನ್ನು ಮಾಡುವುದು. ಒಳಿತುಗಳನ್ನು ಮಾಡುವುದು ಸಹ ಎರಡು ಭಾಗಗಳಲ್ಲಿವೆ. ಒಂದನೆಯ ಭಾಗ ಫರ್ಝ್‌ಗಳು. ಎರಡನೆಯ ಭಾಗ ನಫ್ಲ್‌ಗಳು. ಫರ್ಝ್ ಅಥವಾ ಕಡ್ಡಾಯ ಕರ್ಮಗಳ ಉದಾಹರಣೆ ಸಾಲ ಮರುಪಾವತಿಸುವಂತೆ ಇದೆ. ಇದು ಕಡ್ಡಾಯವಾಗಿದೆ. ಪ್ರತಿಯೊಂದು ಒಳಿತಿನ ಜೊತೆಗೆ ನಫ್ಲ್‌ಗಳು ಇರುತ್ತವೆ. ಆ ನಫ್ಲ್‌ಗಳು ಒಳಿತುಗಳನ್ನು ಮಾಡುವಾಗ ಅವುಗಳ ಜೊತೆಗಿರುತ್ತವೆ. ಉದಾಹರಣೆಗೆ ಉಪಕಾರ ಮಾಡುವುದಕ್ಕೆ ಪ್ರತಿಯಾಗಿ ಉಪಕಾರ ಮಾಡುವುದು ಫರ್ಝ್ ಆಗಿದೆ. ಆದರೆ ಹೆಚ್ಚು ಉಪಕಾರ ಮಾಡುವುದು ನಫ್ಲ್ ಆಗುತ್ತದೆ. ಒಬ್ಬ ವ್ಯಕ್ತಿ ಉಪಕಾರ ಮಾಡಿದ್ದರೆ ಆ ಉಪಕಾರಕ್ಕೆ ಪ್ರತಿಯಾಗಿ ಉಪಕಾರ ಮಾಡಿ ಅನಂತರ ಹೆಚ್ಚು ಉಪಕಾರ ಮಾಡುವುದು ನಫ್ಲ್ ಆಗಿದೆ. ಇವು ಫರ್ಝ್‌ಗಳನ್ನು ಪರಿಪೂರ್ಣಗೊಳಿಸುವ ಕ್ರಮಗಳಾಗಿವೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನ ಪ್ರೀತಿಗಳಿಸಿದ ವಲಿಗಳು ತಮ್ಮ ಧಾರ್ಮಿಕ ಫರ್ಝ್‌ಗಳನ್ನು ನಫ್ಲ್‌ಗಳ ಮೂಲಕ ಪರಿಪೂರ್ಣ ಗೊಳಿಸುತ್ತಾರೆ. ಉದಾಹರಣೆಗೆ ಅವರು ಝಕಾತ್ ಕೊಡುತ್ತಾರೆ. ಅದರೊಂದಿಗೆ ಸದಖಗಳನ್ನು ಸಹ ಕೊಡುತ್ತಾರೆ. ಅಲ್ಲಾಹನು ಅಂತಹ ಜನರ ಸ್ನೇಹಿತನಾಗುತ್ತಾನೆ. ನನಗೆ ಒಂದು ಹದೀಸು ನೆನಪಿಗೆ ಬಂತು, ಒಬ್ಬ ಸಹಾಬಿ ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ, ನಾನು ಅವಿಶ್ವಾಸಿಯಾಗಿದ್ದಾಗ ಬಹಳ ದಾನಧರ್ಮ ನೀಡಿದ್ದೆನು. ನನಗೆ ಅದರ ಪ್ರತಿಫಲ ಸಿಗುವುದೇ? ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಆ ದಾನಧರ್ಮಗಳ ಫಲವೇ ನಿಮಗೆ ಲಭಿಸಿದೆ. ಆ ಸದಖಗಳ ಫಲವಾಗಿಯೇ ನೀವು ಮುಸ್ಲಿಮರಾದಿರಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಧರ್ಮ ಬದ್ಧವಾದ ಪದಾರ್ಥಗಳನ್ನು ಸಹ ಮಿತವಾಗಿ ಬಳಸಬೇಕೆಂದೂ ಹಾಗೆ ಮಾಡುವುದು ಸಹ ಸತ್ಕರ್ಮವಾಗಿದೆ ಎಂದೂ ವಿವರಿಸುತ್ತಾ ಹೇಳಿದರು: ಲೌಕಿಕ ರಸಾನುಭೂತಿ ಪಡೆಯುವುದು ಮತ್ತು ಇಂದ್ರಿಯಾಸಕ್ತಿಯಿಂದ ಸುಖಪಡುವುದು ಧರ್ಮಬದ್ಧವಾಗಿದ್ದರೂ ಅವುಗಳು ಮಿತಿಮೀರದಂತೆ ನೋಡಿಕೊಳ್ಳುವುದು ಸತ್ಕರ್ಮವಾಗಿದೆ. ಉದಾಹರಣೆಗೆ ತಿನ್ನುವುದನ್ನೂ ಕುಡಿಯುವುದನ್ನೂ ಅಲ್ಲಾಹನು ನಿಷಿದ್ಧಗೊಳಿಸಿಲ್ಲ. ಆದರೆ ತಿನ್ನುವುದನ್ನೂ ಕುಡಿಯುವುದನ್ನೂ ರಾತ್ರಿ ಹಗಲು ತನ್ನ ಏಕಮಾತ್ರ ವೃತ್ತಿಯಾಗಿ ಮಾಡಿಕೊಳ್ಳುವುದು ಸರಿಯಲ್ಲ. ಅಲ್ಲಾಹನು ತಿನ್ನುವುದರಲ್ಲಿ ಮತ್ತು ಕುಡಿಯುವುದರಲ್ಲಿ ರಸಾನುಭೂತಿ ಇರಿಸಿರುವುದು ಅವುಗಳಿಂದ ಶಕ್ತಿ ಪಡೆದು ತನ್ನ ಫರ್ಝ್‌ಗಳನ್ನು ಈಡೇರಿಸಲಿಕ್ಕಾಗಿದೆ.

ಒಮ್ಮೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ಅವರು ಪಲಾವ್ ಭಕ್ಷಿಸುತ್ತಾರೆಂದು ಆಕ್ಷೇಪಿಸಲಾಗಿತ್ತು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಹೇಳಿದರು: ಒಳ್ಳೆಯ ಆಹಾರ ಭಕ್ಷಿಸುವುದು ಪ್ರವಾದಿಗಳಿಗೆ ನಿಷಿದ್ಧವಾಗಿದೆ ಎಂದು ನಾನು ಪವಿತ್ರ ಖುರ್‌ಆನ್‌ನಲ್ಲಾಗಲಿ ಮತ್ತು ಹದೀಸ್‌ನಲ್ಲಾಗಲಿ ಎಲ್ಲಿಯೂ ಕಂಡಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪಲಾವ್ ತಿಂದರೆ ಆಕ್ಷೇಪವೇನಿದೆ? ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮ್ಮ ಮುಂದೆ ಇರಿಸಿದ ನಡೆವಳಿಕೆ ಪ್ರಕಾರ ನಾವು ವರ್ತಿಸಬೇಕು. ಅವರು ಒಬ್ಬ ಸಹಾಬಿಯೊಂದಿಗೆ ಹೀಗೆ ಹೇಳಿದರು: ನಾನು ಒಳ್ಳೆಯ ಆಹಾರ ತಿನ್ನುತ್ತೇನೆ. ಒಳ್ಳೆಯ ಬಟ್ಟೆ ಧರಿಸುತ್ತೇನೆ. ನಾನು ವಿವಾಹವಾಗಿದ್ದೇನೆ. ನನಗೆ ಮಕ್ಕಳಾಗಿವೆ. ನಾನು ನಿದ್ರಿಸುತ್ತೇನೆ ಮತ್ತು ಆರಾಧನೆ ಸಹ ಮಾಡುತ್ತೇನೆ. ನನ್ನ ಈ ನಡೆವಳಿಕೆ ಪ್ರಕಾರ ನೀವು ವರ್ತಿಸಿರಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳುತ್ತಾರೆ: ನಮ್ಮ ಉಪದೇಶವೇನೆಂದರೆ ಎಲ್ಲ ಜನರೊಂದಿಗೆ ಉತ್ತಮವಾಗಿ ವರ್ತಿಸಿರಿ. ಸರಕಾರಿ ಅಧಿಕಾರಿಗಳನ್ನು ಸತ್ಯಸಂಧವಾಗಿ ಅನುಸರಿಸಬೇಕು. ಏಕೆಂದರೆ ಅವರು ಸಂರಕ್ಷಣೆ ನೀಡುತ್ತಾರೆ. ನಮ್ಮ ಜೀವ ಮತ್ತು ಸ್ವತ್ತು ಅವರ ಮೂಲಕ ಭದ್ರತೆಯಿಂದ ಇವೆ. ನಿಮ್ಮ ಸಂಬಂಧಿಕರ ಜೊತೆಗೆ ಉತ್ತಮವಾಗಿ ವರ್ತಿಸಿರಿ. ಏಕೆಂದರೆ ಅವರಿಗೆ ಸಹ ಹಕ್ಕುಗಳಿವೆ. ಆದರೆ ಮುತ್ತಖಿಯಾಗಿರದ ವಿರೋಧಿಗಳಾದವರ ಹಿಂದೆ ನಿಂತು ನಮಾಝ್ ಮಾಡಬೇಡಿರಿ. ಆದರೂ ಅವರೊಂದಿಗೆ ಉತ್ತಮವಾಗಿ ವರ್ತಿಸುವುದು ಆವಶ್ಯಕವಾಗಿದೆ. ನೀವು ಎಲ್ಲಾ ಜನರ ಹಿತೈಷಿಗಳಾಗಬೇಕು. ಆದರೆ ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿ ನಿಮ್ಮನ್ನು ನೀವು ರಕ್ಷಿಸಿಕೊಳ್ಳುವುದು ಅತೀ ಅಗತ್ಯವಾಗಿದೆ.

ಒಳಿತಿನ ವಲಯವನ್ನು ಎಷ್ಟು ವಿಶಾಲವಾಗಿ ಮಾಡಬೇಕು ಎಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ನೆನಪಿಟ್ಟುಕೊಳ್ಳಿರಿ, ಸಹಾನುಭೂತಿಯ ವಲಯ ನನ್ನ ದೃಷ್ಟಿಯಲ್ಲಿ ಬಹಳ ವಿಶಾಲವಾಗಿದೆ. ಯಾವುದೇ ಸಮುದಾಯವನ್ನಾಗಲಿ ವ್ಯಕ್ತಿಯನ್ನಾಗಲಿ ಅದರಿಂದ ಹೊರಗಿರಿಸಬಾರದು. ನಾನು, ಇಂದಿನ ಕಾಲದ ತಿಳಿಗೇಡಿಗಳ ಹಾಗೆ ನೀವು ನಿಮ್ಮ ಸಹಾನುಭೂತಿಯನ್ನು ಕೇವಲ ಮುಸ್ಲಿಮರಿಗೆ ಮಾತ್ರ ಸೀಮಿತಗೊಳಿಸಿರಿ ಎಂದು ಹೇಳುವುದಿಲ್ಲ. ನಾನು ಹೇಳುವುದು– ನೀವು ಅಲ್ಲಾಹನ ಎಲ್ಲಾ ಸೃಷ್ಟಿಗಳ ಬಗ್ಗೆ ಸಹಾನುಭೂತಿ ಹೊಂದಿರಿ. ಹಿಂದುವಾಗಲಿ, ಮುಸ್ಲಿಮನಾಗಲಿ ಬೇರೆ ಯಾರೇ ಆಗಿರಲಿ ಎಲ್ಲರೊಂದಿಗೂ ಸಹಾನುಭೂತಿ ಪ್ರಕಟಿಸಿರಿ. ಸಹಾನುಭೂತಿಯನ್ನು ತಮ್ಮ ಕೋಮಿಗೆ ಮಾತ್ರ ಸೀಮಿತಗೊಳಿಸುವವನ ಮಾತುಗಳನ್ನು ನಾನು ಇಷ್ಟಪಡುವುದಿಲ್ಲ. ನಾನು ನಿಮಗೆ ಪದೇ ಪದೇ ಉಪದೇಶ ನೀಡುತ್ತಿದ್ದೇನೆ, ನೀವು ನಿಮ್ಮ ಸಹಾನುಭೂತಿಯ ವಲಯವನ್ನು ಖಂಡಿತವಾಗಿಯೂ ಸೀಮಿತಗೊಳಿಸಬೇಡಿರಿ. ಸಹಾನುಭೂತಿ ಬಗ್ಗೆ ಅಲ್ಲಾಹನು ನೀಡಿದ ಉಪದೇಶವನ್ನು ಅನುಷ್ಠಾನಕ್ಕೆ ತನ್ನಿರಿ. ಅಲ್ಲಾಹನು ಹೇಳುತ್ತಾನೆ: **ಇನ್ನಲ್ಲಾಹ ಯಅ್‌ಮುರು ಬಿಲ್‌ಅದ್‌ಲಿ ವಲ್ ಇಹ್‌ಸಾನಿ ವ ಈತಾಯಿ ಧಿಲ್‌ಖುರ್‌ಬಾ.** ನ್ಯಾಯ ನಿಷ್ಠೆಗೆ ಬದ್ಧರಾಗಲಿಕ್ಕೂ ಔದಾರ್ಯ ತೋರಿಸಲಿಕ್ಕೂ ನಿಕಟ ಬಂಧುಗಳಿಗೆ ಎಂಬಂತೆ (ಪರರಿಗೂ) ಸಹಾಯ ಮಾಡಲಿಕ್ಕೂ ಅಲ್ಲಾಹನು ಆಜ್ಞಾಪಿಸುತ್ತಾನೆ. (16:91).

ನಿಮಗೆ ಒಳಿತನ್ನು ಮಾಡಿದವರಿಗೆ ಒಳಿತನ್ನು ಮಾಡಿರಿ. ನೀವು ಅದಕ್ಕಿಂತ ಹೆಚ್ಚು ಉತ್ತಮವಾಗಿ ವರ್ತಿಸಿರಿ. ಅದು ಔದಾರ್ಯವಾಗಿದೆ. ಆದರೆ ಔದಾರ್ಯ ಮಾಡುವವರು ಕೆಲವು ಸಾರಿ ಅದರ ಬಗ್ಗೆ ಹೇಳುತ್ತಾರೆ. ಆದರೆ ಎಲ್ಲದಕ್ಕಿಂತಲೂ ಉತ್ತಮವಾದುದು ಸಹಜವಾದ ಪ್ರೀತಿಯಿಂದ ಮಾಡುವ ಉಪಕಾರವಾಗಿದೆ. ಅದರಲ್ಲಿ ತಾನು ಔದಾರ್ಯ ಮಾಡಿದ ಬಗ್ಗೆ ಬಡಾಯಿ ಕೊಚ್ಚುವುದು ಇರುವುದಿಲ್ಲ. ತಾಯಿ ತನ್ನ ಮಕ್ಕಳನ್ನು ಪೋಷಿಸುವ ರೀತಿಯ ಹಾಗಿದೆ ಅದು. ನೀವು ಈ ರೀತಿ ಒಳಿತನ್ನು ಮಾಡಿರಿ. ನೀವು ಸಹಜವಾದ ರೀತಿಯಲ್ಲಿ ಸಹಾನುಭೂತಿ ಪ್ರಕಟಿಸಿರಿ. ನೀವು ಅಭಿವೃದ್ಧಿ ಹೊಂದುತ್ತಾ ಸಹಜವಾದ ಸ್ಥಿತಿಗೆ ತಲಪುವ ತನಕ ಪರಿಪೂರ್ಣತೆಗೆ ತಲಪಲಾರಿರಿ. ನೀವು ನೆನಪಿಡಿರಿ, ಅಲ್ಲಾಹನು ಒಳಿತನ್ನು ಬಹಳ ಇಷ್ಟಪಡುತ್ತಾನೆ. ತನ್ನ ಸೃಷ್ಟಿಗಳೊಂದಿಗೆ ಸಹಾನುಭೂತಿಯಿಂದ ವರ್ತಿಸಬೇಕೆಂದು ಅಲ್ಲಾಹನು ಇಚ್ಛಿಸುತ್ತಾನೆಂದು ನೆನಪಿಟ್ಟುಕೊಳ್ಳಿರಿ. ಅವರೊಂದಿಗೆ ಕೆಟ್ಟದಾಗಿ ವರ್ತಿಸಬೇಕೆಂದು ಅಲ್ಲಾಹನು ಇಚ್ಛಿಸುತ್ತಿದ್ದರೆ ಹಾಗೆ ಆಜ್ಞಾಪಿಸುತ್ತಿದ್ದನು. ಆದರೆ ಅಲ್ಲಾಹನ ವೈಭವ ಹಾಗೆ ಇಚ್ಛಿಸುವುದಿಲ್ಲ. ಅವನು ಪರಿಶುದ್ಧನಾಗಿದ್ದಾನೆ.

ನಾವು ಅಲ್ಲಾಹನ ಇಚ್ಛೆ ಪ್ರಕಾರ ಅವನ ಸಂಪ್ರೀತಿ ಗಳಿಸಲು ಒಳಿತುಗಳನ್ನು ಮಾಡುವ ಭಾಗ್ಯ ನಮಗೆ ಲಭಿಸಲಿ. ಅಲ್ಲಾಹನು **ಫಸ್ತಬಿಖುಲ್ ಖೈರಾತ್** ಎಂಬ ಧ್ಯೇಯವನ್ನು ನಮಗೆ ನೀಡಿದ್ದಾನೆ. ನಾವು ಅದನ್ನು ಗಳಿಸುವಂತೆ ಅಲ್ಲಾಹನು ಮಾಡಲಿ – ಆಮೀನ್.

(ಖುತುಬದ ಕೊನೆಗೆ ಹುಝೂರ್ ಈ ಕೆಳಗಿನ ಮೂವರ ನಿಧನದ ಬಗ್ಗೆ ತಿಳಿಸಿ, ಅವರ ಸದ್ಗುಣಗಳನ್ನು ವಿವರಿಸಿ, ಜುಮುಅ ನಮಾಝ್ ನಂತರ ಅವರ ನಮಾಝೆ ಜನಾಝ ಗಾಯಿಬ್ ನಿರ್ವಹಿಸುವುದಾಗಿ ಹೇಳಿದರು:)

1. ಮುಕರ್ರಮ್ ಹಾಮಿದ್ ಮಖ್‌ಸೂದ್ ಆತಿಫ್ ಸಾಹಿಬ್ ಮುರಬ್ಬಿ (ಮುಕರ್ರಮ್ ಪ್ರೊಫೆಸರ್ ಮಸ್‌ಊದ್ ಅಹ್ಮದ್ ಆತಿಫ್‌ರವರ ಪುತ್ರ).

2. ಮುಕರ್ರಮ್ ಅಲಿ ಸಈದ್ ಮೂಸಾ ಸಾಹಿಬ್. ತಾನ್‌ಝಾನಿಯಾದ ಮಾಜಿ ಆಮೀರ್.

3. ಮುಕರ್ರಮ ನುಸ್ರತ್ ಬೇಗಂ ಸಾದಿಖ ಸಾಹಿಬ. ಗರ್‌ಮೂಲಾ ವರ್‌ಕಾಂನಿಂದ ಈಗ ರಬ್ವಕ್ಕೆ ಬಂದು ಅಲ್ಲಿ ವಾಸಿಸುತ್ತಿದ್ದರು.

*****


***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. on 27-10-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon